ಇದ್ರು. ಏನು ಮಾಡಬೇಕೆಂದು ನಂಗೆ ತಿಳೀಲಿಲ್ಲ. ನಾನು ನನ್ನ ಗುಡಿಸಲಿಗೆ ಹೋಗಿ ಒಂದು ಬೀಗ ಹುಡುಕಿ ತಂದು ಬಾಗಿಲಿಗೆ ಹಾಕಿದೆ. ಅದೇ ಬೀಗ ನೋಡಿ. ಇಲ್ಲಿದೆ ಅದರ ಕೀಲಿಕೈ ಎಂದು ಅವನು ಅಭಿಯ ಕೈಯಲ್ಲಿ ಕೀಲಿಕೈಯಿರಿಸಿದ.

ಬಾಗಿಲು ತೆರೆದು ಅಭಿ ಒಳಗೆ ಹೋದ. ಕೆಳಗೆ ಮೇಲೆ ಎಲ್ಲಾ ಕೋಣೆಯ ಬಾಗಿಲುಗಳು ತೆರದೇ ಇದ್ದವು. ಮನೆಯೊಳಗಿನ ಎಲ್ಲಾ ಸಾಧನ ಸರಂಜಾಮುಗಳು ಯಾವುದೂ ಸ್ಥಾನಪಲ್ಲಟಗೊಂಡಿರಲಿಲ್ಲ. ಯಾವಾಗಲೂ ಇರುವಂತೆಯೇ ಇದ್ದವು. ಕೆಳಗೆ ಬಂದು ಅಭಿ ಅಪ್ಪನ ಆಫೀಸು ಕೋಣೆಯಲ್ಲಿ ಕುಳಿತ. ಮೇಜಿನ ಮೇಲಿನ ಕಾಗದದ ಹಾಳೆಗಳು, ಕಡತಗಳು ಎಲ್ಲವನ್ನೂ ಒಂದೊಂದಾಗಿ ಪರಿಶೀಲಿಸಿದ. ಏನೂ ಹೊಸತು ಕಾಣಿಸಲಿಲ್ಲ.

24

ಇಲ್ಲೇ ಕುಳಿತು ಹೀಗೆ ಚಿಂತಿಸಿ ಏನು ಫಲ ಎಂದುಕೊಂಡು ಮನೆಯಿಂದ ಹೊರಟ. ತನ್ನ ಅಪ್ಪನ ಪರಿಚಯವಿರುವವರು ಯಾರಾದರೂ ಸಿಗಬಹುದು ಎಂದು ಒಂದು ಆಟೊ ಹತ್ತಿ ಸಕಲೇಶಪುರ ಬಸ್‌ಸ್ಟ್ಯಾಂಡಿಗೆ ಹೋದ. ಅಪ್ಪನನ್ನು ಏನು ಅಂತ ಹೇಳಿ ವಿಚಾರಿಸುವುದು ಎಂದು ಒಂದಷ್ಟು ಹೊತ್ತು ಯೋಚಿಸುತ್ತಾ ನಿಂತ. ಕೊನೆಗೆ ಆನೆಮಹಲಿನ ಮನೆ ಕಟ್ಟುವ ಕೆಲಸ ಮಾಡಿದ ಆಳುಗಳು ಯಾರಾದರೂ ಸಿಗುತ್ತಾರೊ ಎಂದು ಹುಡುಕಿದ. ಬಹಳ ಹುಡುಕಿದ ಮೇಲೆ ಒಬ್ಬ ಸಿಕ್ಕಿದ. ಅವನ ಮೂಲಕ ಅವನ ಜೊತೆ ಕೆಲಸ ಮಾಡಿದ ಇನ್ನೊಬ್ಬನ ಪರಿಚಯವಾಯಿತು. ಹಾಗೇ ಅಪ್ಪನ ಗುರುತಿರುವವರು ಇದ್ದಾರೆಯೆ ಎಂದು ಹುಡುಕುತ್ತಾ ಗಂಟೆ ಹತ್ತಾಯಿತು. ಒಬ್ಬ ವ್ಯಕ್ತಿ ಅಭಿಯ ಬಳಿಗೆ ಬಂದು,'ಇದೇನಣ್ಣಾ ಇಲ್ಲಿ ನಿಂತಿದ್ದೀರಿ? ಯಾರನ್ನು ಹುಡುಕ್ತಾ ಇದ್ದೀರಿ?' ಎಂದು ಕೇಳಿದ.

ಅಭಿಯಿಂದ ವಿಷಯ ತಿಳಿದ ಬಳಿಕ ಅವನೇ ಬೇರೆ ಮೂರ್ನಾಲ್ಕು ಮಂದಿಯೊಡನೆ ಕೇಳಿದ. ಅದರಲ್ಲಿ ಒಬ್ಬ, ಎರಡು ದಿನದ ಹಿಂದೆ ನಾನು ಬೆಂಗಳೂರಿಗೆ ಹೊರಟಿದ್ದೆ. ಅದೇ ಬಸ್ಸಿಗೆ ನಿಮ್ಮ ಅಪ್ಪ ಹತ್ತಿದ್ರು. 'ಬೆಂಗ್ಳೂರಿಗೆ ಹೊರಟಿದ್ದೀರಾ ಯಜಮಾನ್ರೆ?' ಅಂತ ಕೇಳಿದೆ.

'ಹೌದು' ಅಂತದ್ರು. 'ನಿಮ್ಮ ಮಗ ಬೆಂಗ್ಳೂರಲ್ಲಿದ್ದಾರಾ?' ಅಂತ ಕೇಳಿದೆ.

'ಹೌದು ಅಂದ್ರು, ಬೇರೆ ಏನೂ ಮಾತಾಡ್ಲಿಲ್ಲ'

ಅಭಿ ಮನೆಗೆ ಅದೇ ತುಕ್ಕು ಹಿಡಿದ ಬೀಗ ಹಾಕಿ ಬೆಂಗಳೂರಿಗೆ ಹೊರಟ. ಬೆಂಗಳೂರಿನಲ್ಲಿ ಅಪ್ಪನನ್ನು ಹುಡುಕುವುದೆಂದರೆ ಹುಲ್ಲಿನ ಬಣವೆಯಲ್ಲಿ ಬಿದ್ದ ಸೂಜಿ ಹುಡುಕಿದಂತೆ ಎಂದನಿಸಿತು. ಆದರೂ ಪ್ರೀತಿಯ ಸಾಗರವಾದ ಅಪ್ಪನನ್ನು ಹುಡುಕಲೇ ಬೇಕು ಎಂದು ನಿರ್ಧರಿಸಿ, ಇಲ್ಲಿ ಹುಡುಕಿ ಏನೂ ಪ್ರಯೋಜನವಿಲ್ಲ ಎಂದು ಕೊಂಡು ಆನೆಮಹಲಿಗೆ ಮರಳಿದ. ಅಮರೇಶ ಮತ್ತು ಸನ್ಮತಿ ಎಲ್ಲಿಗೋ ಯಾತ್ರೆ ಹೋಗಿದ್ದಾರೆ, ಅವರು ವಾಪಾಸು ಬರಬಹುದು. ಅವರಿಂದ ಅಪ್ಪ ಎಲ್ಲಿ ಹೋದರು ಎಂದು ತಿಳಿಯಬಹುದು ಎಂಬುದು ಅಭಿಯ ತರ್ಕವಾಗಿತ್ತು.

ಮನೆಯಲ್ಲಿ ಅಕ್ಕಿ ಕಾಳುಬೇಳೆ ಇತ್ಯಾದಿ ಇದ್ದವು. ಗಂಜಿ ಉಪ್ಪಿನಕಾಯಿಯಲ್ಲಿ ಊಟ ಮಾಡಲು ನಿರ್ಧರಿಸಿ ಗಂಜಿ ಬೇಯಿಸಿದ.

25

ಎರಡು ದಿನಗಳ ಬಳಿಕ ಅಮರೇಶ ಮತ್ತು ಸನ್ಮತಿ ಬಂದರು, ಸನ್ಮತಿ ಕಕ್ಕುಲತೆಯಿಂದ, 'ಯಾವಾಗ ಬಂದೆ ಅಭಿ?' ಎಂದು ಕೇಳಿದಳು. ಅದೇ ವಿನಯ ಅದೇ ಪ್ರೀತಿ ವಾತ್ಸಲ್ಯ ತುಂಬಿದ ದನಿ. ಆದರೆ 'ಯಾವಾಗ ಬಂದ್ರಿ ಅಣ್ಣಾ' ಎನ್ನುವುದು 'ಯಾವಾಗ ಬಂದೆ ಅಭಿ?' ಎಂದು ಬದಲಾಗಿದೆ, ಏನು ಕಾರಣ ಎಂದು ಚಿಂತಿಸಿದ.

'ಎರಡು ದಿನ ಆಯ್ತು, ಅಪ್ಪ ಎಲ್ಲಿ?'

'ನಂಗೊತ್ತಿಲ್ವಲ್ಲಾ, ನಾವು ಹೋಗುವಾಗ ಮನೇಲೆ ಇದ್ರು' ಎಂದಳು ಸನ್ಮತಿ.

'ನೀವು ಎಲ್ಲಿಗೆ ಹೋಗಿದ್ರಿ?'

'ನಾವು ಕೊಲ್ಲೂರಿಗೆ ಹೋಗಿದ್ವಿ ಎರಡು ದಿನ ಇದ್ದು ಬಂದ್ವಿ' ಅಮರೇಶನೆಂದ.

ಸನ್ಮತಿ 'ಅಡುಗೆ ಮಾಡ್ತೀನಿ' ಎಂದು ಸ್ವಗತ ಎಂಬಂತೆ ಹೇಳಿ ಒಳಹೋದಳು. ಅವಳ ಹಿಂದೆಯೇ ಅಮರೇಶನೂ ಹೋದ. ಬಹಳ ಹೊತ್ತಿನವರೆಗೆ ಅಡುಗೆ ಕೋಣೆಯಿಂದ ಪಾತ್ರೆ ಪರಡಿಯ ಶಬ್ದ ಕೇಳಿಸದೆ ಮೌನ ನೆಲಸಿದ್ದು ಗಮನಕ್ಕೆ ಬಂದು ಅಭಿ ಏನಾಯಿತು ಗ್ಯಾಸ್ ಖಾಲಿಯಾಯ್ತೆ ಎಂದು ಯೋಚಿಸಿದ. ಅಭಿ ಹಿಂದಿನ ದಿನ ಗಂಜಿ ಬೇಯಿಸಿದಾಗ ಗ್ಯಾಸ್ ಖಾಲಿಯಾಗ್ತಾ ಇದೆಯೇನೊ ಎಂದನಿಸಿತ್ತು. ವಿಚಾರಿಸೋಣ ಎಂದು ಒಳ ಹೋದ. ಅಡುಗೆ ಕೋಣೆಯ ಬಾಗಿಲು ಮುಚ್ಚಿತ್ತು. ಇದ್ಯಾಕೆ ಬಾಗಿಲು ಬಂದ್ ಆಗಿದೆ ಎಂಬ ಯೋಚನೆ ಸ್ವಾಭಾವಿಕವಾಗಿಯೇ ಉಂಟಾಯಿತು. ಒಳಗೆ ಏನೋ ಗುಸು ಗುಸು ಮಾತು ನಡೆಯುತ್ತದೆ ಎನಿಸಿ ಶಬ್ದ ಮಾಡದೆ ಬಾಗಿಲ ಹೊರಗೆ ನಿಂತ. ಅವನ ಕಿವಿಗೆ 'ಬೇಡ, ಅದು ರಿಸ್ಕಿ ಸನ್ಮತಿ' ಎಂಬ ಒಂದು ಮಾತು ಮಾತ್ರ ಕೇಳಿಸಿತು. ಅದನ್ನು ಕೇಳಿ ಯೋಚನೆಗೊಳಗಾದ ಅಭಿ ನಿಧಾನವಾಗಿ ಮುಚ್ಚಿದ ಬಾಗಿಲ ಬಳಿಯಿಂದ ಈಚೆ ಹೆಜ್ಜೆಯಿರಿಸಿದ.

ಕುಶಾಗ್ರಮತಿಯಾದ ಸನ್ಮತಿಗೆ ಕೋಣೆಯ ಹೊರಗಿಂದ ಹೆಜ್ಜೆಯ ಸಪ್ಪಳ ಕೇಳಿಸಿತ್ತು. ಅಮರೇಶ ಬಾಗಿಲು ತೆರೆದು ಹೊರಬಂದು ಅಭಿಯನ್ನು ಕಂಡು, 'ಯಾರೋ ಬಂದ ಹಾಗೆ ಅನಿಸಿತು. ನೀನಾ? ಏನು ಬೇಕಾಗಿತ್ತು?' ಎಂದ.

'ಒಂದು ಲೋಟ ಬಿಸಿನೀರು ಬೇಕಾಗಿತ್ತು' ಎಂದ ಅಭಿ.

ಒಂದೇ ನಿಮಿಷದಲ್ಲಿ ಸನ್ಮತಿ ನೀರಿನ ಲೋಟ ಹಿಡಿದುಕೊಂಡು ಹೊರಬಂದು, ಅಭಿಗೆ ಕೊಟ್ಟು,

'ಅಣ್ಣ ಹೇಳ್ತಾನೆ ಕುಕ್ಕರ್ ಮುಚ್ಚಳ ಬಿಸಿಯಾಗಿರುವಾಗ ತೆಗೆಯೋದು ರಿಸ್ಕಿ ಅಂತ. ನೀನೇ ಹೇಳು ಅಭಿ. ಕುಕ್ಕರ್ ಮುಚ್ಚಳ ಬಿಸಿಯಾಗಿರುವಾಗ ಮುಚ್ಚಳ ತೆಗೀಬಾರ್ದಾ?' ಎಂದು ಕೇಳಿದಳು.

'ತಣ್ಣಗಾದ ಮೇಲೆಯೇ ತೆಗೆಯೋದು ಒಳ್ಳೇದು. ಮೊದಲೇ ತೆಗೀಬೇಕಂತಿದ್ರೆ ತಣ್ಣೀರು ಸುರಿದು ಸ್ವಲ್ಪ ಹೊತ್ತಿನ ನಂತರ ತೆಗೀಬಹುದು' ಎಂದು ಹೇಳಿ ಅಭಿ ಹೋಗಿ ಅಪ್ಪನ ಕೋಣೆಯಲ್ಲಿ ಓದುತ್ತಾ ಕುಳಿತ. ಸನ್ಮತಿ ಇಂಥ ಸಿಲ್ಲಿ ಪ್ರಶ್ನೆಯನ್ನು ಕೇಳಲು ಯಾಕೆ ಬಂದಳು ಎಂಬ ಯೋಚನೆಯಿಂದ ಅಭಿಗೆ ಹೊರಬರಲಾಗಲಿಲ್ಲ. ಇದು ಸ್ವಾಭಾವಿಕ ಅಲ್ಲ, ಕುಕ್ಕರ್ ಮುಚ್ಚಳ ತೆರೆಯುವ ಮಾತಿನಲ್ಲಿ ಯಾವುದೋ ಸತ್ಯವನ್ನು ಮುಚ್ಚುವ ಪ್ರಯತ್ನ ಇದೆ ಎಂದನಿಸಿತು ಅಭಿಗೆ. 'ಅದು ರಿಸ್ಕಿ' ಎಂಬ ಅಮರೇಶನ ಮಾತು ಸಂದರ್ಭಕ್ಕೆ ಸರಿಯಾದದ್ದೇ ಆಗಿತ್ತು. ಆದರೆ ಅದು ಎಚ್ಚರ ನೀಡುವ ಮಾತಿನ ಜೊತೆ ಏನೋ ಒಂದು ರಹಸ್ಯವನ್ನು ಹೇಳುವಂತೆ ಅತ್ಯಂತ ಕೆಳ ದನಿಯಲ್ಲಿತ್ತು ಎಂದನಿಸಿತು ಅಭಿಗೆ. ಆದ್ದರಿಂದ ಅದರಲ್ಲೇನೋ ರಹಸ್ಯ ಇದೆ ಎಂದನಿಸಿತು. ಆದರೆ ಅದು ಇಂಥದೇ ಎಂದು ನಿರ್ಧರಿಸಲು ಆಗಲಿಲ್ಲ. ಇನ್ನಷ್ಟು ಯೋಚಿಸಿ ನೋಡು, 'ಅದು ಗುಸುಗುಸು ಮಾತು ಮತ್ತು ಅಡುಗೆ ತಯಾರಾಗುತ್ತಿರುವಾಗ ಅಡುಗೆ ಕೋಣೆಯಲ್ಲಿ ನಡೆಯುವ ಯಾವುದಕ್ಕೋ ಸಂಬಂಧಿಸಿದ ಮಾತು' ಎಂದು ಅಭಿಯ ಒಳ ಮನಸ್ಸು ಹೇಳಿತು. ಹೌದು ಇದು ತಯಾರಿಯಲ್ಲಿರುವ ಯಾವುದೋ ಒಂದು ಖಾದ್ಯಕ್ಕೆ ಸಂಬಂಧಿಸಿದ ಮಾತು ಯಾಕಾಗಿರಬಾರದು? ಹಾಗಿದ್ದರೆ ಅದರಲ್ಲಿ ರಿಸ್ಕ್ ಏನು ಎಂದು ಅದೇ ಮನಸ್ಸು ಪುನಃ ಕೇಳಿತು.

26

ಅಭಿ ಅಸ್ಪಷ್ಟವಾದ ಒಂದು ನಿರ್ಧಾರಕ್ಕೆ ಬಂದ. ಊಟಕ್ಕೆ ಸಕಲೇಶಪುರದ ಒಂದು ಒಳ್ಳೆಯ ಹೋಟೆಲಿಗೆ ಹೋಗುವುದು ದೊಡ್ಡ ದೂರವೇನಲ್ಲ ಎಂದುಕೊಂಡ. ಮತ್ತೆ ಅವನ ಮನಸ್ಸು ಅಪ್ಪನನ್ನು ಹುಡುಕುವ ವಿಚಾರಕ್ಕೆ ಮರಳಿತು.

ರಾತ್ರಿಯಾದೊಡನೆ ಏನೋ ಆತಂಕ ಅಭಿಯನ್ನು ಕಾಡತೊಡಗಿತು. ಇದು ಈಗ ಮನೆಯಂತಿಲ್ಲ. ಇಲ್ಲಿ ಮಲಗುವುದಕ್ಕಿಂತ ಹೊರಗೆ ಟೆಂಟ್ ಹಾಕಿಕೊಂಡು ಮಲಗುವುದೇ ಹಿತಕರವೆನಿಸತೊಡಗಿತು. ಬರೀ ಅನಿಸಿಕೆ, ಹಾಗೆ ಮಲಗುವುದು ಸಾಧ್ಯವಿರಲಿಲ್ಲ, ಅದು ಸಾಧುವಾದ ವಿಚಾರವೂ ಆಗಿರಲಿಲ್ಲ. ಇಲ್ಲಿಂದ

## ಗೆಳೆಯರು

ಸಿಕ್ಕಾಪಟ್ಟೆ ಗೆಳೆಯರು
ಇದ್ದಾರೆ ನನಗೆ
ಫೇಸ್ ಬುಕ್ಕಲ್ಲಿ
ತಿರುಗಿ ನೋಡುವುದಿಲ್ಲ
ಒಬ್ಬರೂ ನನ್ನ
ಕಷ್ಟ ಕಾಲದಲ್ಲಿ!

★ **ಕಾಸರಗೋಡು ಅಶೋಕ್ ಕುಮಾರ್**



ಈಶ್ವರ